(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, "1996ರ ಕರ್ನಾಟಕ ಪಂಚಾಯತ್ ರಾಜ್ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, '1996ರ ಕರ್ನಾಟಕ ಪಂಚಾಯತ್ ರಾಜ್ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

11 ಪ್ರಕಟಣೆ

ಅವಿಶ್ವಾಸ ನಿರ್ಣಯದ ಚರ್ಚೆ ಬಗ್ಗೆ

ಅಧ್ಯಕ್ಷರು : ಬೆಳಿಗ್ಗೆ ನಾನು ಅವಿಶ್ವಾಸ ನಿರ್ಣಯದ ಸೂಚನೆ ಮೇಲಿನ ಚರ್ಚೆ 19ನೇ ತಾರೀಖು ಎನ್ನುವ ಮಾತು ಹೇಳಿದೆ. ಮಾನ್ಯ ವಿರೋಧ ಪಕ್ಷದ ಮುಖಂಡರುಗಳು ಒಂದು ಅಭಿಪ್ರಾಯ ವ್ಯಕ್ತಪಡಿಸಿದರು. 19 ಒಂದು ದಿನ ಚರ್ಚೆಗೆ ಸಾಕಾಗುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದರಿಂದ ಮತ್ತು ನಂತರದ ದಿನಗಳಲ್ಲಿ ಪ್ರಧಾನ ಮಂತ್ರಿಗಳ ಕಾರ್ಯಕ್ರಮ ಮೊದಲ ಬಾರಿಗೆ ಅಧಿಕೃತವಾಗಿ ರಾಜ್ಯದಲ್ಲಿ ಅವರು ಬರುತ್ತಿರುವುದರಿಂದ ಆಡಳಿತ ಪಕ್ಷದವರಿಗೆ ಇರುವ ತೊಂದರೆಯನ್ನು ಗಮನದಲ್ಲಿಟ್ಟುಕೊಂಡು 26 ಮತ್ತು 27 ಎರಡು ದಿನಗಳ ಪೂರ್ಣಾವಧಿಗೆ ಅವಿಶ್ವಾಸ ನಿರ್ಣಯದ ಬಗ್ಗೆ ತೆಗೆದುಕೊಳ್ಳುವುದಕ್ಕೆ ದಿನಾಂಕ ನಿಗದಿಪಡಿಸಿದೆ. ಇದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

12. ವಿಶೇಷ ಪ್ರಸ್ತಾಪ

ಸಭಾಧ್ಯಕ್ಷರ ವಿದೇಶ ಪ್ರವಾಸಕ್ಕೆ ಶುಭ ಕೋರುವ ಬಗ್ಗೆ

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೇ, ತಮ್ಮ ಅನುಮತಿ ಕೋರಿ, ಒಂದು ವಿಶೇಷ ಪ್ರಸ್ತಾವನೆ ಮಾಡುವುದಕ್ಕೆ ಬಯಸುತ್ತಿದ್ದೇನೆ. ನಮ್ಮ ಮಾನ್ಯ ಸಭಾಧ್ಯಕ್ಷರು ಇದೇ 16ನೇ ತಾರೀಖಿನಿಂದ ಸೆಪ್ಟೆಂಬರ್ 30ರವರೆಗೆ ವಿದೇಶ ಪ್ರವಾಸದಲ್ಲಿರುತ್ತಾರೆ. ಅವರು 16ರಿಂದ 26ರವರೆಗೆ 42ನೇ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಕಾನ್ಫರೆನ್ಸಿಗೆ ಕೌಲಾಲಂಪುರದಲ್ಲಿ ಭಾಗವಹಿಸುವುದಕ್ಕೆ ಹೋಗುತ್ತಿದ್ದಾರೆ. ಆದಾದ ಮೇಲೆ ಪೋಸ್ಟ್ ಕಾನ್ಫರೆನ್ಸ್ ಟೂರ್ ಎಂದು ಬಾಕಿ ಇರತಕ್ಕ ದಿನಗಳಲ್ಲಿ ಅವರು ಆಸ್ಟ್ರೇಲಿಯ, ಹಾಂಕಾಂಗ್, ಜಪಾನ್, ನ್ಯೂಜಿಲ್ಯಾಂಡ್, ಪಿಲಿಫೈನ್ಸ್, ಸೌತ್‌ಕೋರಿಯ, ಸಿಂಗಾಪುರ್ ರಾಷ್ಟ್ರಗಳಲ್ಲಿರತಕ್ಕ ನಮ್ಮ

ಪ್ರಜಾತಂತ್ರ ವ್ಯವಸ್ಥೆ ಮತ್ತು ಅಲ್ಲಿಯ ಸಂಸದೀಯ ವ್ಯವಹಾರಗಳ ವಿಚಾರಗಳು ಯಾವ ರೀತಿ ಇದೆ ಎಂಬುದನ್ನು ಕೂಡ ಅಧ್ಯಯನ ಮಾಡಲಿಕ್ಕೆ ಹೋಗುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ಸಂಪೂರ್ಣವಾಗಿ ಸದನದ ಪರವಾಗಿ ಅವರಿಗೆ ವಿದೇಶ ಪ್ರಯಾಣಕ್ಕೆ ಸುಖಕರವಾಗಿರತಕ್ಕ ಪ್ರಯಾಣವನ್ನು ಬಯಸುತ್ತಿದ್ದೇನೆ. ಅವರು ಸುಖಕರವಾಗಿಹೋಗಿಬರಲಿ, ಮತ್ತು ಇದರ ಜೊತೆಯಲ್ಲಿ ಅವರು ಒಬ್ಬರೇ ಹೋಗುವುದಿಲ್ಲ, ಅವರ ಧರ್ಮಪತ್ನಿಯನ್ನೂ ಕೂಡ ಅವರು ಕರೆದುಕೊಂಡು ಹೋಗುತ್ತಿದ್ದಾರೆ. ಇದು ಒಂದು ಶುಭ ಸಂತೋಷದ ವಿಚಾರ.

4.20 ಪಿ.ಎಂ.

ಆದ್ದರಿಂದ ಎಲ್ಲರೂ, ಯಾರೆಲ್ಲಾ ಮದುವೆಯಾಗಿ ಹೆಂಡತಿಯರಿದ್ದಾರೆ ಅವರೆಲ್ಲರೂ ಕೂಡ ಈ ತರಹ ವಿದೇಶ ಪ್ರವಾಸ ಹೋಗುವಾಗ ಅವರ ಮಾರ್ಗದರ್ಶನವನ್ನು ಅನುಸರಿಸಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಂಡು ನಾನು ಸದನದ ಪರವಾಗಿ ಸರ್ಕಾರದ ಪರವಾಗಿ ಅವರಿಗೆ ತುಂಬುಹೃದಯದ ಸುಖ ವಿದೇಶ ಪ್ರಯಾಣವನ್ನು ಬಯಸುತ್ತೇನೆ. ಅವರ ಸುಮಾರು 45 ದಿವಸಗಳ ಈ ವಿದೇಶ ಪ್ರವಾಸದಲ್ಲಿ ಭಗವಂತ ಅವರಿಗೆ ಸಂಪೂರ್ಣವಾಗಿರತಕ್ಕಂಥ ಆರೋಗ್ಯವನ್ನು ಕೊಡುವುದರ ಜೊತೆಗೆ ಅವರ 45 ದಿವಸಗಳ ಈ ಒಂದು ಪ್ರವಾಸದಲ್ಲಿ ಅವರು ಅಧ್ಯಯನ ಮಾಡಿ ಬಂದಮೇಲೆ, ನಮ್ಮ ಜೊತೆಯಲ್ಲಿ ಅವರು ಸಂಪೂರ್ಣವಾಗಿ ಹಂಚಿಕೊಳ್ಳುತ್ತಾರೆ. ಆದ್ದರಿಂದ ನಾವೂ ಕೂಡ ಸಂಸದೀಯ ವ್ಯವಹಾರದಲ್ಲಿ ಹೆಚ್ಚುಹೆಚ್ಚು ನಮ್ಮ ಜ್ಞಾನವನ್ನು ಬೆಳೆಸುವುದಕ್ಕೆ ನಮಗೆ ಸಂಪೂರ್ಣವಾಗಿ ಅವರು ಮಾರ್ಗದರ್ಶನ ಮಾಡುತ್ತಾರೆಂದು ಈ ಸಂದರ್ಭದಲ್ಲಿ ಹೇಳಿ ಸರ್ಕಾರದ ವತಿಯಿಂದ, ಈ ಸದನದ ವತಿಯಿಂದ ತುಂಬುಹೃದಯದ ಸುಖ ಪ್ರಯಾಣವನ್ನು ನಾನು ಬಯಸುತ್ತೇನೆ.

ಶ್ರೀ ವೈ. ರಾಮಕೃಷ್ಣ (ಆನೇಕಲ್) : ನಮ್ಮ ಪಕ್ಷದ ಪರವಾಗಿ, ಎಲ್ಲರ ಪರವಾಗಿ ನಮ್ಮ ನೆಚ್ಚಿನ ಶಾಸನಸಭೆಯ ಅಧ್ಯಕ್ಷರು 45 ದಿವಸಗಳ ಕಾಲ ಹೊರದೇಶಕ್ಕೆ ಹೋಗುವಂಥ ಈ ಸಂದರ್ಭದಲ್ಲಿ ದೇವರು ಅವರಿಗೆ ಸಂಪೂರ್ಣವಾದಂಥ ಆಯಸ್ಸು ಆರೋಗ್ಯವನ್ನು ಕೊಡಲಿ ಎಂದು ನಾನು ಹಾರೈಸಿ ತಾವು ಬರುವಾಗ ಇನ್ನೂ ಹೆಚ್ಚಿನ ಒಂದು ಹುರುಪಿನಿಂದ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯತಕ್ಕ ಶಕ್ತಿಸಾಮರ್ಥ್ಯಗಳನ್ನು ತಂದು ಈ ರಾಜ್ಯದಲ್ಲಿ ಬೀರಲಿ ಎಂದು ನಾನು ಭಗವಂತನಲ್ಲಿ ಪ್ರಾರ್ಥನೆ ಮಾಡಿಕೊಂಡು ಶುಭ ಹಾರೈಸುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಸನ್ಮಾನ್ಯ ಸಭಾಧ್ಯಕ್ಷರೇ, ಬಹಳ ಶುಭವಾದ ವಿಷಯ. ನಾವು ಮೂರು ತಿಂಗಳಿಂದ ಬಹಳ ನಿರೀಕ್ಷೆಯಲ್ಲಿದ್ದೆವು. ಎಲ್ಲಾ ಮಹಿಳಾ ಶಾಸಕರು, ಈ ಸದನದಲ್ಲಿ ಮತ್ತು ಮೇಲ್ಮನೆಯಲ್ಲಿರತಕ್ಕ ಎಲ್ಲಾ ಮಹಿಳೆಯರೂ ಕೂಡ ಈ ಶುಭಸಂದರ್ಭದಲ್ಲಿ ನಾವೂ ಕೂಡ ನಿಮ್ಮ ಜೊತೆ ಬರುತ್ತೇವೆ ಎಂದು ಅಂದುಕೊಂಡಿದ್ದೆವು. ಕಾರಣ ಏನು ಎಂದು ಹೇಳುತ್ತಿದ್ದೇನೆ. ಮುತ್ತಲಗೇರಿಯವರು ಸೆಕ್ರೆಟರಿಯಾಗಿದ್ದಾಗ ಅವರಿಗೆ ಒಂದು ಲೆಟರ್ ಬಂದಿತ್ತು ಕೌಲಾಲಂಪುರದಿಂದ. ಅದರಲ್ಲಿ ಏನು ಹೇಳಿತ್ತು ಅಂದರೆ ಕೌಲಾಲಂಪುರದಲ್ಲಿ ಏನು ವಿಷಯವನ್ನು ತಾವು ಡಿಸ್‌ಕಸ್ ಮಾಡುವುದಕ್ಕೆ ಹೋಗುತ್ತಾ ಇದ್ದೀರಿ ಆ ವಿಷಯ ಏನು ಎಂದರೆ "ಮಹಿಳೆ ಮತ್ತು ರಾಜಕೀಯ" ಎನ್ನತಕ್ಕಂಥ ವಿಷಯ ಎಂದು

ಹೇಳಿ ಅಲ್ಲಿ ಬಹಳ ದೊಡ್ಡದಾಗಿ ಬರೆದಿದ್ದರು. ಮತ್ತು ಇರತಕ್ಕಂಥ ಎಲ್ಲಾ ಮಹಿಳೆಯರನ್ನೂ ಕಳುಹಿಸಿಕೊಡಿ ಎಂದು ನಮಗೆ ಲೆಟರ್ ಬಂದಿವೆ ಎಂದು ತಿಳಿಸಿದರು. ಆನಂತರ ನಾವೆಲ್ಲಾ ಮಹಿಳೆಯರೂ ಕೂಡ ಮಹಿಳೆ ಮತ್ತು ರಾಜಕೀಯ ವಿಷಯ ಇರತಕ್ಕ ಸಂದರ್ಭದಲ್ಲಿ ಈ ವಿಷಯವನ್ನು ಮಾತನಾಡುವುದಕ್ಕೆ ಆದಷ್ಟು ಮಹಿಳೆಯರು ಹೋಗಬೇಕು. ಹೋಗುತ್ತಾರೆ. ಅಲ್ಲಿನ ಅನುಭವ ಇಡೀ ಪ್ರಪಂಚದಿಂದ ಕಾಮನ್‌ವೆಲ್ತ್ ಕಂಟ್ರಿಯಿಂದ ಬಂದಿರತಕ್ಕಂಥ ಎಲ್ಲಾ ಮಹಿಳೆಯರನ್ನೂ ನೋಡಿ ಅವರು ಹೇಗೆ ಭಾಗವಹಿಸುತ್ತಾರೆ ಎಂದು ನೋಡಿ ತಿಳಿದುಕೊಂಡು ಬಂದು ನಮ್ಮಲ್ಲಿರತಕ್ಕ ಎಲ್ಲಾ ಸದಸ್ಯರಿಗೂ ಕೂಡ ತಿಳಿಸಿ ಇಲ್ಲಿ ಮಂಡಲ ಪಂಚಾಯತ್, ತಾಲ್ಲೂಕು ಪಂಚಾಯತ್ ಜಿಲ್ಲಾ ಪಂಚಾಯತ್‌ನಲ್ಲಿರತಕ್ಕ ಮಹಿಳೆಯರಿಗೂ ಕೂಡ ಇದರ ಮಾಹಿತಿ ತಂದುಕೊಡಬೇಕು ಎಂದು ಬಹಳ ಆಸೆಯಿಂದ ಆಸಕ್ತರಾಗಿದ್ದೆವು. ಕಾರಣಾಂತರಗಳಿಂದ ತಮ್ಮ ಗಮನಕ್ಕೆ ಮತ್ತು ಸರ್ಕಾರದ ಗಮನಕ್ಕೆ ಆ ಲೆಟರನ್ನು ತಲುಪಿಸಿಲ್ಲ ಎನ್ನತಕ್ಕಂಥದ್ದನ್ನು ನಾನು ಕೇಳಿದ್ದೇನೆ. ಅದಕ್ಕೆ ಯಾರು ಕಾರಣಕರ್ತರೋ ಅದು ನನಗೆ ಗೊತ್ತಿಲ್ಲ. ಆದರೆ ತಾವು ಈಗ ಹೋಗಿಬರುತ್ತಾ ಇದ್ದೀರಿ. ಎಲ್ಲಾ ಮಹಿಳೆಯರ ಪರವಾಗಿ ತಾವು ಹೋಗಿಬನ್ನಿ. ತಮ್ಮ ಜೊತೆ ತಮ್ಮ ಧರ್ಮಪತ್ನಿಯವರೂ ಕೂಡ ಬರುತ್ತಾ ಇರತಕ್ಕಂಥ ಸಂದರ್ಭದಲ್ಲಿ ಮಹಿಳೆಯರ ಪರವಾಗಿ ಮಹಿಳೆಯರು ರಾಜಕೀಯದಲ್ಲಿ ಕರ್ನಾಟಕದಲ್ಲಿ ಯಾವ ರೀತಿ ಕೆಲಸ ನಿರ್ವಹಣೆ ಮಾಡುತ್ತಾ ಇದ್ದಾರೆ, ಯಾವ ರೀತಿ ಮುಂದೆ ಬರಬಹುದು ಎನ್ನುವುದನ್ನು ತಾವು ನಮ್ಮೆಲ್ಲರ ಪರವಾಗಿ ಅಲ್ಲಿ ಮಾತನಾಡಬೇಕು. ಮಹಿಳೆಯರ ಪರವಾಗಿ ಮಾತನಾಡಬೇಕು. ಅದರಲ್ಲೂ ತಾವು ಧರ್ಮಪತ್ನಿಯವರನ್ನು ಕರೆದುಕೊಂಡು ಹೋಗುತ್ತಾ ಇರುವುದರಿಂದ.....

ಶ್ರೀ ಎಂ.ಆರ್. ಲಕ್ಷ್ಮಯ್ಯ : ಪುರುಷರ ಬಗ್ಗೆ.....

ಶ್ರೀಮತಿ ಪ್ರಮೀಳಾ ನೇಸರ್ಗಿ : ಸನ್ಮಾನ್ಯ ಸಭಾಧ್ಯಕ್ಷರೆ, ತಾವು ತಮ್ಮ ಧರ್ಮಪತ್ನಿಯನ್ನು ಕರೆದುಕೊಂಡು ಹೋಗುತ್ತಾ ಇರತಕ್ಕಂಥ ಶುಭಸಂದರ್ಭದಲ್ಲಿ ನನ್ನ ಅನಿಸಿಕೆ ಏನೆಂದರೆ ಅವರೂ ಕೂಡ ಅಲ್ಲಿಗೆ ಹೋಗಿಬಂದಮೇಲೆ ರಾಜಕೀಯದಲ್ಲಿ ಸಕ್ರೀಯವಾಗಿ ಭಾಗವಹಿಸುವುದಕ್ಕೆ ತಾವು ಅವಕಾಶವನ್ನು ಮಾಡಿ ಕೊಡುತ್ತೀರಿ ಎನ್ನತಕ್ಕಂಥ ಭಾವನೆಯನ್ನು ನಾನು ಅವರ ಪರವಾಗಿ ಕೇಳಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಈ ಮನೆಯ ನಮ್ಮ ಎಲ್ಲಾ ಸದಸ್ಯರು ಮೇಲ್ಮನೆಯ ಸದಸ್ಯರು ಹೋಗುವುದಕ್ಕೆ ಅವಕಾಶ ತಪ್ಪಿರತಕ್ಕ ಸಂದರ್ಭದಲ್ಲಿ ನಾನು ಎಲ್ಲಾ ಮಹಿಳೆಯರ ಪರವಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ, ತಮ್ಮ ಹಾಗೆ ಎಲ್ಲಾ ಮಹಿಳಾ ಸದಸ್ಯರೂ ಕೂಡ ಬಹಳ ಆಸಕ್ತರಾಗಿದ್ದಾರೆ. ಎಲ್ಲಾ ವಿಚಾರವನ್ನೂ ಕೂಡ ತಿಳಿದುಕೊಂಡು ಬರಬೇಕು ಎಂದು ಆಸಕ್ತರಾಗಿದ್ದಾರೆ. ಆದ್ದರಿಂದ ತಾವು ನಮಗೆ ಈ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟು ಹೋಗಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ. ಎಲ್ಲಾ ಮಹಿಳೆಯರಿಗೂ ಈ ಒಂದು ಎಜ್ಯುಕೇಷನ್ ಟೂರ್ ಮಾಡಿ ತಿಳಿದುಕೊಂಡುಬರುವಂಥ ಒಂದು ಅವಕಾಶವನ್ನು ತಾವು ಕಲ್ಪಿಸಿಕೊಡಬೇಕು. 45 ದಿನ ಆಗಬಹುದು, 60 ದಿವಸ ಆಗಬಹುದು. ಯಾವುದೂ ಚಿಂತೆ ಇಲ್ಲ. ಎಲ್ಲವನ್ನೂ ಓದಿಕೊಂಡು ಬರುವುದಕ್ಕೆ ನಮಗೂ ಕೂಡ ತಾವು ಅವಕಾಶ ಮಾಡಿಕೊಡಬೇಕೆಂದುರ ಹೇಳಿ ತಮಗೆ ಹ್ಯಾಪಿ ಜರ್ನಿ ವಾಯೇಜ್. ಶುಭವಾಗಿ ಹೋಗಿ ಶುಭವಾಗಿ ಎಲ್ಲರೂ ಸುಖಕರವಾಗಿ ತಮ್ಮ ಜೀವನವನ್ನು ನಡೆಸಿಕೊಂಡು ಬರಬೇಕು ಎಂದು ಈ ಸಂದರ್ಭದಲ್ಲಿ ಹಾರೈಸಿ ನನ್ನ ಎರಡು ಮಾತನ್ನು ಮುಗಿಸುತ್ತಿದ್ದೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ತಾವು ಕರ್ನಾಟಕ ವಿಧಾನಸಭೆಯ ಅಧ್ಯಕ್ಷರಾಗಿ .....

ಶ್ರೀ ಎಂ.ಆರ್. ಲಕ್ಷ್ಮಯ್ಯ: ಅವರ ಪರವಾಗಿ .....

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಸ್ವಾಮಿ, ಮಹಿಳೆಯರು ಮಾತನಾಡುವುದಕ್ಕೆ ನಿಂತರೆ ಇವರಿಗೆ ಯಾವಾಗಲೂ ಕಷ್ಟ ಆಗುತ್ತದಲ್ಲಾ ನಾವು ಮಾತನಾಡಿದ ನಂತರ ನೀವು ಮಾತನಾಡಿ ಸ್ವಾಮಿ. ಬೇಡ ಎನ್ನುವುದಿಲ್ಲ. ಈಗ ದಯವಿಟ್ಟು ಕುಳಿತುಕೊಳ್ಳಿ. ಸಮಗ್ರ ಕರ್ನಾಟಕ ಸರ್ಕಾರದ ಕಡೆಯಿಂದ ವಿಧಾನಸಭೆ ಹಾಗೂ ಮೇಲ್ಮನೆಯ ಎಲ್ಲರ ಹಾರೈಕೆಯಿಂದ ತಾವು ಸಂಸತ್ತಿನ ಪಟುಗಳಾಗಿ ನಮ್ಮ ಅಧ್ಯಕ್ಷರಾಗಿ ಕೌಲಾಲಂಪುರದಲ್ಲಿ ನಡೆಯತಕ್ಕಂಥ ಸಮ್ಮೇಳನಕ್ಕೆ ಹೊರಡುತ್ತಾ ಇದ್ದೀರಿ. ತಮಗೆ ಶುಭವಾಗಲಿ. ಸಂಸತ್ತಿನಲ್ಲಿ ನಡೆಯತಕ್ಕ ಎಲ್ಲಾ ಚಟುವಟಿಕೆಗಳ ಬಗ್ಗೆ ಹಾಗೂ ಈಗ ಕೌಲಾಲಂಪುರದಲ್ಲಿ ನಡೆಯತಕ್ಕಂಥ ಒಂದು ವಿಷಯ ಮಹಿಳೆ ಮತ್ತು ರಾಜಕೀಯಕ್ಕೆ ಸಂಬಂಧಪಟ್ಟಿರತಕ್ಕಂಥದ್ದು. ತಾವು ನಮ್ಮ ಪರವಾಗಿ ಕರ್ನಾಟಕದಲ್ಲಿ ಮಹಿಳೆಯರಿಗಾಗಿ ರಾಜಕೀಯ ಸ್ಥಾನಮಾನಗಳನ್ನು ರಾಜಕೀಯ ಪ್ರಬುದ್ಧತೆಯನ್ನು ಎತ್ತಿ ಹಿಡಿಯುತ್ತೀರಿ ಎನ್ನುವ ಸಂಪೂರ್ಣವಾದ ವಿಶ್ವಾಸ ನಮಗಿದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತಿದ್ದೇನೆ. ನಮ್ಮ ಪ್ರತಿನಿಧಿಯಾಗಿ ತಾವು ತಮ್ಮ ಶ್ರೀಮತಿಯವರನ್ನು ಕರೆದುಕೊಂಡು ಹೋಗುವುದು ಒಂದು ಶುಭಸೂಚನೆ. ದಯವಿಟ್ಟು ಅವರೂ ಸಕ್ರಿಯವಾಗಿ ಆ ಸಮ್ಮೇಳನದಲ್ಲಿ ಭಾಗವಹಿಸಲಿ. ಒಂದು ಮಾತು. ಮುಂದೆನಡೆಯುವ ಸಮ್ಮೇಳನಕ್ಕೆ ನಮ್ಮಲ್ಲೂ ಕೂಡ ಸಾಕಷ್ಟು ಮಹಿಳೆಯರಿದ್ದಾರೆ. ಅವರನ್ನೂ ಕಳುಹಿಸಿಕೊಡುತ್ತೇವೆ, ಎಂದು ನಮ್ಮೆಲ್ಲರ ಪರವಾಗಿ ತಾವೇ ಹೇಳಿ ಬನ್ನಿ ಎಂದು ನಾನು ಹೇಳುತ್ತಾ ಇದ್ದೇನೆ. ತಮಗೆ ಶುಭವಾಗಲಿ. ಹಾಗೂ ತಮ್ಮ ಪ್ರಯಾಣ ಸುಖಕರವಾಗಲಿ ಎಂದು ಹಾರೈಸುತ್ತೇನೆ ಸ್ವಾಮಿ.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ (ದೇವದುರ್ಗ) : ಸನ್ಮಾನ್ಯ ಅಧ್ಯಕ್ಷರೆ, ನಾನು ಎಲ್ಲರ ಪರವಾಗಿ ಅಲ್ಲ. ನಾನು ನನ್ನ ಒಂದು ಭಾವನೆಯನ್ನು ಹೇಳುತ್ತಾ ಇದ್ದೇನೆ.ತಾವು ಹೋಗುತ್ತಿದ್ದೀರಿ.

ತಮಗೆ ಶುಭ ಹಾರೈಸುತ್ತೇನೆ. ಹಾಗೆಯೇ ತಾವು ಒಂದು ತಿಳಿದುಕೊಂಡು ಬರಬೇಕು. ಅಲ್ಲಿ ಬರುವಂಥ ಮುಖಂಡರು ಯಾವ ಯಾವ ದೇಶದವರು ಬರುತ್ತಾರೆ, ಎಷ್ಟು ಜನ ಮಹಿಳಾವಾದಿಗಳಿದ್ದಾರೆ ಮತ್ತು ಎಷ್ಟು ಜನ ಮಹಿಳಾ ವಿರೋಧಿಗಳಿದ್ದಾರೆ, ಪರ್ಸೆಂಟೇಜ್ ಎಷ್ಟು ಎಂದು ದಯವಿಟ್ಟು ಅಷ್ಟು ತಿಳಿದುಕೊಂಡು ಬನ್ನಿ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಸನ್ಮಾನ್ಯ ಅಧ್ಯಕ್ಷರೆ, ತಾವು ಪರದೇಶಕ್ಕೆ ಒಂದು ವಿಶೇಷವಾದಂಥ ಅಧ್ಯಯನ ಪ್ರವಾಸವನ್ನು ಕೈಗೊಂಡಿದ್ದೀರಿ. ಅದರಲ್ಲೂ ಅಲ್ಲಿರತಕ್ಕ ಮಹಿಳೆಯರು ಮತ್ತು ರಾಜಕೀಯ ಎನ್ನತಕ್ಕ ಒಂದು ಕಾನ್‌ಫರೆನ್ಸ್ ಏನು ನಡೆಯುತ್ತಾ ಇದೆ ಆ ಒಂದು ಕಾನ್‌ಫರೆನ್ಸ್‌ಗೆ ತಾವು ನಮ್ಮ ಕರ್ನಾಟಕ ರಾಜ್ಯದಿಂದ ಅದರಲ್ಲೂ ವಿಶೇಷವಾಗಿ ನಮ್ಮ ವಿಧಾನಸಭೆಯಿಂದ ತಾವು ಪ್ರತಿನಿಧಿಸುತ್ತಾ ಇದ್ದೀರಿ.

ಇಲ್ಲಿರತಕ್ಕ ಪರಿಸ್ಥಿತಿಯೂ ಕೂಡ ತಮಗೆ ಗೊತ್ತಿದೆ. ಮತ್ತು ಅಲ್ಲಿ ಇಡೀ ಪ್ರಪಂಚದ ಜನ ಪ್ರಜಾಪ್ರಭುತ್ವದ ಮೇಲೆ ವಿಶೇಷವಾಗಿ ನಂಬಿಕೆ ಇರತಕ್ಕಂಥ ಪ್ರತಿನಿಧಿಗಳೂ ಕೂಡ ಅಲ್ಲಿ ಬರುತ್ತಾರೆ. ಅಂದಾಗ ತಮಗೆ ಹೆಚ್ಚಿನ ಮಾಹಿತಿ ಅನುಭವ ಕೂಡ ಸಿಗುತ್ತದೆ. ಯಾವ ರೀತಿಯಾಗಿ ಒಂದು ಸಾಮಾಜಿಕ ನ್ಯಾಯವನ್ನು ನಾವು ನಮ್ಮ ರಾಜ್ಯದಲ್ಲಿ, ದೇಶದಲ್ಲಿ ಒದಗಿಸಿಕೊಡಬಹುದು ಎನ್ನತಕ್ಕಂಥದ್ದನ್ನು ತಿಳಿದುಕೊಂಡು ಬನ್ನಿ ತಾವು ನಂಬಿಕೊಂಡಿರತಕ್ಕ ತತ್ವಗಳ ಮತ್ತು ನಂಬಿಕೆಗಳ ಬಗ್ಗೆಯೂ ಕೂಡ ಇನ್ನು ಹೆಚ್ಚಿನ ವಿಶ್ವಾಸ ಬೆಳೆಯಲಿಕ್ಕೂ ಕೂಡ ಸಾಧ್ಯವಾಗುತ್ತದೆ. ಏಕೆಂದರೆ ಈಗಾಗಲೇ ತಾವು ಸಾಮಾಜಿಕ ಸಮಾನತೆಯ ಮೇಲೆ ನಂಬಿಕೆ ಇರತಕ್ಕಂಥವರು ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸಬೇಕು ಎನ್ನತಕ್ಕಂಥ ತತ್ವದಲ್ಲಿ ಹೆಚ್ಚಿನ ನಂಬಿಕೆಯನ್ನು ಇಡುವುದರಿಂದ ಅಲ್ಲಿ ನಡೆದಂಥ ನಡವಳಿಕೆ ಪ್ರೊಸೀಡಿಂಗ್ಸ್ ಮತ್ತು ಇನ್ನಿತರ ಚಟುವಟಿಕೆಗಳನ್ನು ಕೂಡ ತಾವು ತಿಳಿದುಕೊಳ್ಳುವುದಕ್ಕೆ ಕೂಡ ತಮಗೆ ಶಕ್ತಿ ಇದೆ. ಆ ಅನುಭವದ ಆಧಾರದ ಮೇಲೆ ಇಲ್ಲೂ ಕೂಡ ತಾವು ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೂ ಸಾಧ್ಯವಾಗುತ್ತದೆ. ಮತ್ತು ಇಲ್ಲಿ ಈಗಾಗಲೇ ನಾವು ಮಹಿಳೆಯರಿಗೆ 33 ಪರ್ಸೆಂಟ್ ರಿಸರ್ವೇಷನ್ ಮಾಡಬೇಕೆಂಬ ಕೂಗು ಅಂದರೆ ಪಾರ್ಲಿಮೆಂಟ್ ಮತ್ತು ಅಸೆಂಬ್ಲಿಯಲ್ಲಿ ಕೂಡ ಇದೆ. ಈಗಾಗಲೇ ನಾವು ಪಂಚಾಯತ್ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಅದನ್ನು ಮಾಡಿದ್ದೇವೆ. ಎಷ್ಟರ ಮಟ್ಟಿಗೆ ನಾವು ಅದನ್ನು ಯಶಸ್ವಿಯಾಗಿ ಮಾಡಬಹುದು ಮತ್ತು ಅದಕ್ಕೆ ಎಷ್ಟರಮಟ್ಟಿಗೆ ನಾವು ಇನ್ನೂ ಜೀವ ತುಂಬಬಹುದು ಎನ್ನಿತಕ್ಕದ್ದನ್ನು ತಾವು ಹೆಚ್ಚಿನ ಶಕ್ತಿಯನ್ನು ತಂದು ತಮ್ಮ ಅನುಭವದ ಆಧಾರದ ಮೇಲೆ ಕೊಡುತ್ತೀರಿ ಎನ್ನತಕ್ಕಂಥ ನಂಬಿಕೆಯನ್ನು ಇಟ್ಟುಕೊಂಡು ತಮ್ಮ ಜೊತೆಯಲ್ಲಿ ನನ್ನ ಸಲಹೆ ಏನೆಂದರೆ ಈಗ 30 ಪರ್ಸೆಂಟ್ ರಿಸರ್ವೇಷನ್ ಅಂದರೆ ಕಡೇಪಕ್ಷ ಇಬ್ಬರಿಗಾದರೂ ತಾವು ಜೊತೆಯಲ್ಲಿ ಕರೆದುಕೊಂಡು ಹೋಗಬಹುದಾಗಿತ್ತು ಈ ಕಾನ್‌ಫರೆನ್ಸ್‌ಗೆ ಹೆಣ್ಣುಮಕ್ಕಳನ್ನು.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಅವರಿಗೆ ಪತ್ನಿ ಇರುವುದು ಒಬ್ಬರೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ ಇಲ್ಲ ಅವರಲ್ಲ. ಸದಸ್ಯರನ್ನು ಹೇಳುವುದು. ಅವರಂತೂ ಅವರಿಗೆ ಇವರು ಬಿಟ್ಟುಹೋಗುವುದಿಲ್ಲ, ಇವರಿಗೆ ಅವರು ಬಿಟ್ಟುಹೋಗುವುದಿಲ್ಲ, ಆ ಮಾತು ಬೇರೆ. ಆದರೆ ಇಲ್ಲಿಯ ಒಂದಿಬ್ಬರು ಸದಸ್ಯರಿಗಾದರೂ ಕೂಡ ಈ ಒಂದು ಕಾನ್‌ಫರೆನ್ಸ್‌ನಲ್ಲಿ ಭಾಗಿಗಳಾಗಿತಕ್ಕಂಥಾಗಿದ್ದರೆ ಬಹುಶಃ ಅದರ ಅನುಭವವನ್ನು ಅವರೂ ಕೂಡ ಇಲ್ಲಿ ಒಂದು ಸೆಮಿನಾರ್ಸ್ ಕಂಡಕ್ಟ್ ಮಾಡಿ ಕಾನ್‌ಫರೆನ್ಸ ಮಾಡಿ ಸ್ವಲ್ಪ ಅಡ್ಡಾಡಿ ಜನರಿಗೆ ಅಂದರೆ ವಿಶೇಷವಾಗಿ ಮಹಿಳೆಯರಿಗೆ ಇದರ ಬಗ್ಗೆ ಸ್ವಲ್ಪ ತಿಳಿವಳಿಕೆ ಕೊಡತಕ್ಕ ಕೆಲಸವನ್ನು ಕೂಡ ಅವರು ಮಾಡುತ್ತಿದ್ದರು.

ಅದಕ್ಕಾಗಿ ದಯವಿಟ್ಟು ಈ ಸಂದರ್ಭದಲ್ಲಿ ಅದು ಆಗದಿದ್ದರೂ ಕೂಡ ಮುಂದಾದರೂ ಯಾವುದಾದರೂ ಕಾರಣದಿಂದ ನಮ್ಮ ಫೈನಾನ್ಸ್ ಮಿನಿಸ್ಟರ್ ಒಪ್ಪಿದರೆ ಅದನ್ನು ಮಾಡಬಹುದು. ಅದೇನು ದೊಡ್ಡದು ಇಲ್ಲ. ಅದಕ್ಕೆ ತಮ್ಮ ಬೆಂಬಲ ಮತ್ತು ಆಶೀರ್ವಾದ ಇದ್ದರೆ ಬಹುಶಃ ಇಂತಹ ಯೋಜನೆಗಳು ಬೇಗನೆ ಜಾರಿಗೆ ಬರುತ್ತವೆ. ನಿಮ್ಮ ಟೂರ್ ಬಹಳ ಯಶಸ್ವಿಯಾಗಲಿ, ಅದರಿಂದ ನಮಗೆ ಮುಂದೆ ಲಾಭ ಸಿಗಲಿ, ಈ ಸದನಕ್ಕೂ ಕೂಡ ಅದರ ಲಾಭ ನಮಗೆ ಸಿಗಲಿ ಎಂದು ಹೇಳಿ. ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್‌ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಒಂದು ಸಂತೋಷವಾದ ಸುದ್ದಿ ಆದರೆ ನೀವು ಬಹಳ ಸಂಘಜೀವಿ. ಮಿತ್ತು ಸ್ನೇಹಜೀವಿ.

ವಿದೇಶಕ್ಕೆ ತಾವು ಒಬ್ಬರೇ ತಮ್ಮ ಪತ್ನಿಯ ಜೊತೆ ಹೋಗುತ್ತಿದ್ದೀರಿ. ನೀವು ಎಷ್ಟೇ ಇದ್ದರೂ ಎಲ್ಲಾ ಸ್ನೇಹಿತರ ಜೊತೆಯಲ್ಲಿ ಹಗಲು ರಾತ್ರಿ ನೀವು ಮಾತನಾಡಿ ಕುಳಿತು ಚರ್ಚಿಮಾಡಿ ಕೋಪತಾಪಗಳು ಸ್ನೇಹ, ಸಂತೋಷ ಅನೇಕ ವಿಚಾರಗಳಲ್ಲಿ ಎಲ್ಲರೂ ಭಾಗಿಯಾಗುತ್ತಿದ್ದಿರಿ. ಆದರೂ ತಾವು ಮತ್ತು ತಮ್ಮ ಪತ್ನಿ ಜೊತೆ ಹೋಗುತ್ತಿದ್ದೀರಿ. ಬಹಳ ಸಂತೋಷ. ತಮ್ಮ ವಿದೇಶ ಪ್ರಯಾಣ ಸುಖಕರವಾಗಲಿ. ತಮ್ಮ ವಿದೇಶದ ಪ್ರವಾಸದ ಅನುಭವದಿಂದ ಈ ರಾಜ್ಯಕ್ಕೂ ದೇಶಕ್ಕೂ ಹೆಚ್ಚಿನ ಲಾಭ ತರಲಿಯೆಂದು ಹೇಳಿ ನಾನು ಪರಮಾತ್ಮನಲ್ಲಿ ಪ್ರಾರ್ಥನೆ ಮಾಡಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ನೇಹಿತರನ್ನು ಬಿಟ್ಟು ಹೋಗುತ್ತಿದ್ದೀರಲ್ಲಾ ಎನ್ನತಕ್ಕ ಕೋಪದಲ್ಲಿ ಮಾನ್ಯ ವಾಟಾಳ್‌ನಾಗರಾಜ್‌ರವರು ಕಡಿಮೆ ಮಾತನಾಡಿದ್ದಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಅಧ್ಯಕ್ಷರು, ಮತ್ತು ಸಂಸದೀಯ ಸಚಿವರು ವಿದೇಶಕ್ಕೆ ಹೋಗುತ್ತೀರಿ, ತಾವೆಲ್ಲರೂ ತಮ್ಮ ಧರ್ಮಪತ್ನಿಯೋಡನೆ ಹೋಗಬೇಕೆಂದು ಹೇಳಿ, ಎಲ್ಲರ ಮನಸ್ಸಿಗೂ ಸಂತೋಷಪಡಿಸಿದರು. ಆದರೆ ಮಾನ್ಯ ಶ್ರೀರಾಮರೆಡ್ಡಿಯವರು ಏನೆಂದು ಹೇಳಬೇಕು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಯಾರೂ ವಿದೇಶಕ್ಕೆ ಹೋಗಬಾರದೆಂದು ಅದರ ಅರ್ಥ ಅಷ್ಟೆ.

ಶ್ರೀ ಎನ್. ಯೋಗೀಶ್‌ಭಟ್ : ನಾನು ಕ್ರಿಯಾಲೋಪ ಎತ್ತುತ್ತೇನೆ. ಈ ಕಡೆಯಲ್ಲಿ ರಾಮದಾಸ್‌ರವರು, ಅಂಗಾರರವರು ಇದ್ದಾರೆ, ಇನ್ನು ಬಹಳ ಜನ ಇದ್ದಾರೆ ಅವರ ಬಗ್ಗೆಯೂ ಹೇಳಬೇಕು ಮಾನ್ಯ ಪುಟ್ಟಣ್ಣಯ್ಯನವರು.

ಶ್ರೀ ಸಿ. ಬೈರೇಗೌಡ : ಸ್ವಾಮಿ ಮೀರ್ ಎಮೋ ಅವುತಲಾ ಪೋತಾವುಂಟಾರಂಟಂ ಕ್ಷೇಮಗುಲು ಪೊಮಿ ಲಾಭುಂಗ್ಲೋರಾಂಡಿ.

ಅಧ್ಯಕ್ಷರು : ಎಲ್ಲಾ ಅತ್ಮೀಯ ಸದಸ್ಯರುಗಳಿಗೆ ನನ್ನ ಹೃತ್ಪೂರ್ವಕ ವಂದನೆಗಳು. ಇದೊಂದು ಪುಣ್ಯ. ನಾನು ಈ ಸ್ಥಾನಕ್ಕೆ ಕೊಟ್ಟಿದ್ದಕ್ಕಿಂತ ಈ ಸ್ಥಾನ ನನಗೆ ಕೊಟ್ಟಿದ್ದೇ ಹೆಚ್ಚು. ಅಂದಿನ ಮುಖ್ಯಮಂತ್ರಿಗಳಾದಂತಹ ಮಾನ್ಯ ದೇವೇಗೌಡರು ನನಗೆ ಈ ಅಧಿಕಾರವನ್ನು ವಹಿಸಿಕೊಳ್ಳಬೇಕೆಂದು ಹೇಳಿ ವಹಿಸಿದಂದಿನಿಂದ ಸದನ ನನಗೆ ಅನುಮತಿಯನ್ನು ಕೊಟ್ಟು ನನ್ನನ್ನು ಈ ಸ್ಥಾನಕ್ಕೆ ಆಯ್ಕೆ ಮಾಡಿದಂದಿನಿಂದ ಇಲ್ಲಿಯವರೆಗೆ ನಿರಂತರವಾಗಿ ನಿಮ್ಮ ಪ್ರೀತಿ ವಿಶ್ವಾಸಗಳಿಂದ ನಾನು ಸದನವನ್ನು ನಡೆಸಿಕೊಂಡು ಹೋಗುತ್ತಿದ್ದೇನೆ. ಜನ ಪ್ರತಿನಿಧಿಗಳಿಂದ ಕೂಡಿರತಕ್ಕ ಇಡೀ ಸದನ ನನಗೆ ಶುಭ ಹಾರೈಸಿದ್ದನ್ನು ನೆನಸಿಕೊಂಡರೆ ಮೈಯೆಲ್ಲಾ ಒಂದು ರೀತಿ ರೋಮಾಂಚನವಾಗುತ್ತಿದೆ. ನಾನು ಅನೇಕ ಸಂದರ್ಭದಲ್ಲಿ ಹೇಳಿದ್ದೇನೆ. ನನ್ನ ತಾಯಿ ಅನಕ್ಷರಸ್ಥೆ, ನನ್ನ ತಂದೆ ಎರಡು ಮೂರು ಕ್ಲಾಸ್ ಓದಿದವರು. ಸಾಮಾನ್ಯ ಕುಟುಂಬದಲ್ಲಿ ಹುಟ್ಟಿದಂತಹವನು. ನಾನು ನನ್ನ ಕ್ಷೇತ್ರದ ಜನತೆ ಆಶೀರ್ವಾದ ಮಾಡಿ ಇಲ್ಲಿಗೆ ಕಳಿಹಿಸಿ ತಾವೆಲ್ಲಾ ನನಗೆ ಈ ಆಶೀರ್ವಾದ ಕೊಟ್ಟಿದ್ದರಿಂದ ಇಂತಹ ಒಂದು ಅವಕಾಶ ನನಗೆ ಸಿಕ್ಕಿದೆ. ಈ ಸದನ ಯಾವ ಭಾವನೆಗಳೊಂದಿಗೆ ನಾನು ಹೊರ ದೇಶಕ್ಕೆ ಹೋಗಿ ಬರಬೇಕೆಂದು ಅಪೇಕ್ಷಪಟ್ಟಿದೆ ಆ ನಿಮ್ಮ ನಂಬಿಕೆಯನ್ನು ನಾನು ಹುಸಿ ಮಾಡುವುದಿಲ್ಲ. ಸಕ್ರಿಯವಾಗಿ ನಾನು ಈ ಸಮಾವೇಶದಲ್ಲಿ ಪಾಲ್ಗೊಳ್ಳುತ್ತೇನೆ ಎನ್ನತಕ್ಕ ಭರವಸೆಯನ್ನು ಕೊಡುತ್ತಾ. ಸಹೋದರಿ ಪ್ರಮೀಳಾರವರು ಒಂದು ಮಾತನ್ನು ಹೇಳಿದರು. ನಾನು ಇಷ್ಟೇ

ಸ್ಪಷ್ಟಪಡಿಸಲಿಕ್ಕೆ ಇಷ್ಟಪಡುತ್ತೇನೆ. ಮಹಿಳೆಯರು ರಾಜಕಾರಣದಲ್ಲಿ ಸಕ್ರೀಯವಾಗಿರಬೇಕು ಎನ್ನುವ ಆ ಸಂಬಂಧಿಸಿದ ವಿಷಯವೂ ಕೂಡ ನಾವು ಚರ್ಚೆಮಾಡತಕ್ಕ ವಿಷಯಗಳಲ್ಲಿ ಒಂದಾಗಿದೆ. ಇದಲ್ಲದೆ ಇನ್ನು 8-9 ವಿಷಯಗಳನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಒಬ್ಬರು ಮಹಿಳಾ ಪ್ರತಿನಿಧಿಗಳನ್ನು ಕರೆದುಕೊಂಡು ಹೋಗಬೇಕೆನ್ನುವ ಅಭಿಪ್ರಾಯ ಕೂಡ ನಮ್ಮದು ಇತ್ತು. ಅದು ಏನೇ ಇರಲಿ, ಅದು ನಾವು ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಅವರು ಕೊಟ್ಟಿರತಕ್ಕ ಸಲಹೆಯನ್ನು ನಾನು ಅತ್ಯಂತ ಒತ್ತಾಯಪೂರ್ವಕವಾಗಿ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಮುಂದೆ ನಾವು ಒಂದು ರಾಜ್ಯದಿಂದ ಮಹಿಳಾ ನಿಯೋಗವನ್ನು ಕಳುಹಿಸುವುದಕ್ಕೆ ಪ್ರಯತ್ನಪಡುತ್ತೇನೆ ಎನ್ನುವ ಮಾತನ್ನು ಅವರಿಗೆ ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಮಾನ್ಯ ವಾಟಾಳ್‌ನಾಗರಾಜ್‌ರವರು ಹೇಳಿದರು. ನಮ್ಮನ್ನೆಲ್ಲಾ ಬಿಟ್ಟು ಹೋಗಿಬರುವುದು ನಿಮಗೆ ಕಷ್ಟವಾಗುತ್ತದೆ ಎನ್ನುವ ಅವರ ಮಾತಿನ ಎಲ್ಲಾ ಒಳ ಅರ್ಥ ನನಗಾಗಿದೆ ನಾನು ಆಗ ಸ್ನೇಹತರನ್ನು ಗಳಿಸಿಕೊಳ್ಳುತ್ತೇನೆ. ನನ್ನ ಸ್ನೇಹ ಸಮ್ಮೋಹವನ್ನು ಇನ್ನು ಹೆಚ್ಚು ಮಾಡಿಕೊಳ್ಳುತ್ತೇನೆ. ಆದರೆ ನಿಮ್ಮನ್ನೆಲ್ಲಾ ಕರೆದುಕೊಂಡು ಹೋಗಿದ್ದರೆ ಬಹಳ ಚೆನ್ನಾಗಿ ಆಗುತ್ತಿತ್ತು ಎನ್ನುವುದು ನನಗೆ ಗೊತ್ತಿದೆ. ನಾವೆಲ್ಲರೂ ಕಲೆತು ಹೋಗುವುದಕ್ಕೆ ವ್ಯವಸ್ಥೆ ಮಾಡೋಣ. ಮಾನ್ಯ ಪುಟ್ಟಣ್ಣಯ್ಯನವರು ಹೇಳಿದಂತೆ ಯಾರ್ಯಾರು ಶ್ರೀರಾಮರೆಡ್ಡಿಯಂತಹವರು ಇದ್ದಾರೆ ಅವರಿಗೆ ಏನು ಮಾಡಿದರೆ ಸರಿಹೋಗಬಹುದು ಇಂತಹ ವಿದೇಶಪ್ರವಾಸಕ್ಕೆ ತರೆದುಕೊಂಡು ಹೋಗ ಬಹುದು ಎನ್ನುವುದಕ್ಕೂ ಕೂಡ ಯೋಚನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರನ್ನು ಬಹಳ ಜನ ಈಗಾಗಲೇ ಮದುವೆಯಾಗುತ್ತೇನೆಂದು ಬಂದಿದ್ದಾರೆ. ಯಾರನ್ನು ಮಾಡಬೇಕೆನ್ನುವುದು ಒಂದು ದೊಡ್ಡ ಸಮಸ್ಯೆಯಾಗಿ ಕುಳಿತುಕೊಂಡು ಬಿಟ್ಟಿದೆ. ಏಕೆಂದರೆ ಈ ಸಭೆಯಲ್ಲಿ ಶ್ರೀರಾಮರೆಡ್ಡಿಯವರಿಗೆ ಮದುವೆಯಾಗಿಲ್ಲವೆಂದು ಈ ರಾಜ್ಯಕ್ಕೆ ಗೊತ್ತಾಗಿದ್ದು ಪ್ರಪ್ರಥಮ ಈ ಸಭೆಯ ಮೂಲಕ. ಪತ್ರಿಕೆಗಳ ಮುಖಾಂತರ ಬಂತು, ಅದು ಆದಮೇಲೆ ಅನೇಕ ಕಡೆಯಿಂದ ನಾನು ಮದುವೆಯಾಗುತ್ತೇನೆ ನಾನು ಮದುವೆಯಾಗುತ್ತೇನೆಂದು ಆಹ್ವಾನ ಬಂದಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ ಸಾರ್. ಸದನಕ್ಕೆ ಮಾನ್ಯ ಸದಸ್ಯರು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ. ಯಾರೂ ಮದುವೆಯಾಗುತ್ತೇನೆಂದು ಹೇಳಿಲ್ಲ. ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ.

ಅಧ್ಯಕ್ಷರು : ಇಲ್ಲ, ನಿಮಗೆ ಮದುವೆಯಾಗುವುದರಿಂದ ಮಾನ್ಯ ವಾಟಾಳ್‌ನಾಗರಾಜ್‌ರವರಿಗೆ ಏನು ಅನುಕೂಲವೋಗೊತ್ತಿಲ್ಲ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮದುವೆ ಮಾಡುವುದಕ್ಕೆ ನಾನು ಪುಟ್ಟಣ್ಣಯ್ಯ ಮತ್ತು ಮುನಿಯಪ್ಪನವರು ತೀರ್ಮಾನ ಮಾಡಿಕೊಂಡಿದ್ದೇವೆ. ನಮ್ಮ ಹತ್ತಿರ ತಾನೇ ನಾವು ಕೊಡುತ್ತೇವೆ ಹೆಣ್ಣು ನಾವು. ಕೊಡುತ್ತೇವೆಂದು ಬರುವುದು. ಇವರ ಹತ್ತಿರ ಯಾರಾದರೂ ನೇರವಾಗಿ ಬಂದು ಬಿಡುತ್ತಾರೋ? ಇವರ ಮುಖ ನೋಡಿ ಯಾರಾದರೂ ನೇರವಾಗಿ ಬರುತ್ತಾರೋ ಇಷ್ಟು ಕೋಪತಾಪಗಳು ಇದ್ದರೆ ಯಾವ ಹೆಣ್ಣು ಹತ್ತಿರಕ್ಕೆ ಬರುತ್ತದೆ?

ಅಧ್ಯಕ್ಷರು : ಯಾರಿಗೆ ಮಾಡಿಕೊಳ್ಳಬೇಕೆನ್ನುವ ಬಗ್ಗೆ ಆ ವಿಚಾರದಲ್ಲಿ ನಿಮಗೇನಾದರೂ ತೊಂದರೆಯಿದ್ದರೆ ಸದನ ಸಮಿತಿಯನ್ನು ಏರ್ಪಾಟು ಮಾಡೋಣ. ಅದಕ್ಕೇನೂ ನೀವು ಒದ್ದಾಡಬೇಕಾಗಿಲ್ಲ.

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್‌ನಾಗರಾಜ್‌ರವರು ಹೆಣ್ಣು ನೋಡುತ್ತೇನೆಂದು ಹೋಗಿ ಅವರೇ ಎಲ್ಲಿಯಾದರೂ ಮದುವೆಯಾಗಿ ಬಿಟ್ಟಾರು ಎಂಬ ಗಾಬರಿ ನಮಗೆ.

ಅಧ್ಯಕ್ಷರು : ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ನಾನು ಧರ್ಮಪತ್ನಿ ಜೊತೆ ಹೋಗುತ್ತಿದ್ದೇನೆ, ಎಲ್ಲರೂ ಹೋಗಿ ಬರಬೇಕೆಂದು ಹೇಳಿದರು. ನಾನು ಮತ್ತು ನಾಣಯ್ಯನವರಿಗೆ ಅಷ್ಟೇ ಸಾಧ್ಯವಾಗುವುದು. ನಾವು ಧರ್ಮಪತ್ನಿಯರ ಜೊತೆಗೆ ಹೋಗುವುದು ಅಷ್ಟೇ ಸಾಧ್ಯ. ನಾವು ಹೆಚ್ಚು ಸಾಹಸ ಮಾಡಲಿಕ್ಕೆ ಶಕ್ತಿಯಿರತಕ್ಕವರಲ್ಲ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ನಾಣಯ್ಯನವರು ತಮ್ಮ ಜೊತೆಯಲ್ಲಿ ಬರುತ್ತಿದ್ದಾರೊ?

ಅಧ್ಯಕ್ಷರು : ಇಲ್ಲ, ಅವರು ಹೋಗಬೇಕಾಗಿದ್ದರೂ ಒಂದು ವೇಳೆ ಹಾಗೆ ಹೋಗಬೇಕಲ್ಲಾ.

ಶ್ರೀ ವಾಟಾಳ್ ನಾಗರಾಜ್ : ಈ ನಿರ್ಧಾರಗಳನ್ನೆಲ್ಲಾ ಈ ಸದನದಲ್ಲಿ ದಯವಿಟ್ಟು ಚರ್ಚೆ ಮಾಡುವುದಕ್ಕಾಗುವುದಿಲ್ಲ.

ಶ್ರೀಮತಿ ಪ್ರಮೀಳಾನೇಸರ್ಗಿ : ಮಾನ್ಯ ನಾಣಯ್ಯನವರ ಬಗ್ಗೆ, ಅವರು ಅದನ್ನು ಒಪ್ಪುತ್ತಾರೋ ಇಲ್ಲವೋ ನನಗೆ.....

ಅಧ್ಯಕ್ಷರು : ಇಲ್ಲ, ಅಷ್ಟರವರೆಗೆ ನಾನು ಅವರ ಬಗ್ಗೆ ಧೈರ್ಯವಾಗಿ ಹೇಳಬಲ್ಲೆ. ಅವರು ಬಹಳ ವರ್ಷದ ಗೆಳೆಯರು ನನಗೆ.

ಶ್ರೀ ವಾಟಾಳ್ ನಾಗರಾಜ್ : ಈಗ ತಾವು ಬರೀ ಮಹಿಳೆಯರನ್ನೇ ಕಳುಹಿಸುತ್ತೇನೆಂದು ಹೇಳಿಬಿಟ್ಟಿರಲ್ಲಾ ನೀವು, ಅದೇನು ನಿಮಗೆ ಬರೀ ಮಹಿಳೆಯರ ಬಗ್ಗೆ ಅಭಿಮಾನವೇ? ನಾವುಗಳು ಯಾರು ಪುರುಷರು ಯಾರೂ ನಿಮಗೇನು ಸ್ನೇಹಿತರುಗಳು ನಿಮಗೆ ಯಾರೂ ಇಲ್ಲವೊ? ಅಥವಾ ಈ ಸಭೆಯಲ್ಲಿ ನಾವು ಯಾರೂ ಸದಸ್ಯರಲ್ಲವೊ?

ಅಧ್ಯಕ್ಷರು : ಅದಕ್ಕೆ ಹೇಳಿದ್ದೇನೆ ನಿಮ್ಮನ್ನು ಕೂಡ ಕರೆದುಕೊಂಡು ಹೋಗತಕ್ಕ ಪ್ರಯತ್ನ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇದು ತೀರಾ ಅತ್ಯಂತ ಯಾವ ಪದಗಳನ್ನು ಇದರ ಬಗ್ಗೆ ಉಪಯೋಗಿಸಬೇಕೋ ನನಗಂತೂ ಅರ್ಥವಾಗುತ್ತಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಅಧ್ಯಕ್ಷರೆ, ನಮ್ಮ ಸಹೋದರಿಯವರು ಹೇಳಿದ ಹಾಗೆ, ನಾವು ಹೋಗುವಾಗ ಹೆಂಡಂದಿರನ್ನು ಕರೆದುಕೊಂಡು ಹೋಗುವಹಾಗೆ ಮಹಿಳೆಯರು ಹೋಗುವಾಗ ಗಂಡಂದಿರನ್ನು ಕರೆದುಕೊಂಡು ಹೋಗಬಹುದು ಎಂದು ಕಾಣುತ್ತದೆ.

ಅಧ್ಯಕ್ಷರು : ತಮ್ಮೆಲ್ಲರ ಭಾವನೆಗಳಿಗೂ ನಾನು ಸ್ಪಂದಿಸುತ್ತೇನೆ. ಕರ್ನಾಟಕ ವಿಧಾನಸಭೆಯ ಗೌರವವನ್ನು ಹೆಚ್ಚಿಸತಕ್ಕ ರೀತಿಯಲ್ಲಿ ಅಲ್ಲಿ ನಡೆದುಕೊಳ್ಳುತ್ತೇನೆ ಎನ್ನಿತಕ್ಕ

ಮಾತನ್ನು ತಮಿಗೆಲ್ಲಾರಿಗೂ ತಿಳಿಸಿ ನಿಮ್ಮ ಶುಭಾಶಯಗಳಿಗೆ ನಾನು ವಂದಿಸುತ್ತಿದ್ದೇನೆ. ನಮಸ್ಕಾರ. ಎರಡು ವಿಧೇಯಕಗಳಿವೆ. ಮಾನ್ಯ ಉಪಾಧ್ಯಕ್ಷರು ಬಂದು ಸಭೆಯನ್ನು ನಡೆಸಿ ಕೊಡುತ್ತಾರೆ. ದಯಮಾಡಿ ನನಗೆ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಸಿ. ಮಾಮನಿ)ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

13. ಶಾಸನ ರಚನಾ ಕಾರ್ಯಕಲಾಪಗಳು

(ಅ) ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕ 1996

+ ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1996ನೇ ಸಾಲಿನ ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾಪ ಮಂಡಿಸಲ್ಪಟ್ಟಿತು

ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಇದೊಂದು ಚಿಕ್ಕದಾದಂತಹ ತಿದ್ದುಪಡಿ, ಈ ತಿದ್ದುಪಡಿಯನ್ನು ತರಲಿಕ್ಕೆ ಇರತಕ್ಕ ಕಾರಣ 1992ನೇ ಇಸವಿಯಲ್ಲಿ ಆಲ್ ಇಂಡಿಯಾ ಜಡ್ಜಸ್ ಅಸೋಸಿಯೇಷನ್‌ರವರು ಸುಪ್ರೀಂಕೋರ್ಟ್‌ನಲ್ಲಿ ಒಂದು ಅರ್ಜಿಯನ್ನು ದಾಖಲಿಸುವುದರ ಮುಖಾಂತರ ಸಬಾರ್ಡಿನೇಟ್ ಜ್ಯುಡಿಷಿಯರಿಯಲ್ಲಿರತಕ್ಕ ಹೆಸರುಗಳನ್ನು ಏಕ ರೂಪದಲ್ಲಿ ತರಬೇಕೆಂದು ಹೇಳತಕ್ಕ ಒಂದು ಮನವಿಯನ್ನು ಮಾಡಿಕೊಂಡಿದ್ದರು. ಆ ಮನವಿಗನುಗುಣವಾಗಿ ನಮ್ಮ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ 1993ನೇ ಇಸವಿಯಲ್ಲಿ ಒಂದು ತೀರ್ಪನ್ನು ಕೊಡುವುದರ ಮೂಖಾಂತರ 14ನೇ ಲಾ ಕಮಿಷನ್ ರಿಪೋರ್ಟ್‌ನಲ್ಲೂ ಕೂಡ ಈ ಸಲನೆಯನ್ನು ಅವರು ಮಾಡಿದ್ದರು. ಅವರು ಡಿಸ್ಟ್ರಿಕ್ಟ್ ಜಡ್ಜ್ಸ್, ಅಡಿಷನಲ್ ಡಿಸ್ಟ್ರಿಕ್ಟ್ ಜಡ್ಜ್ಸ್, ಸಿವಿಲ್ ಜಡ್ಜಸ್ ಎಂದು ಹೇಳುವುದನ್ನು ಸಿವಿಲ್ ಜಡ್ಜ್ ಸೀನಿಯರ್, ಮುನ್ಸೀಫ್ ಅಂಡ್ ಮ್ಯಾಜಿಸ್ಟ್ರೇಜ್ ಕೋರ್ಟನ್ನು ಸಿವಿಲ್ ಜಡ್ಜ್ ಜೂನಿಯರ್ ಎಂದು ಹೇಳತಕ್ಕ ರೀತಿಯಲ್ಲಿ ಮಾಡಬೇಕೆಂದು ಅದೇ ರೀತಿ ಒಂದು ತೀರ್ಮಾನವನ್ನು ತೆಗೆದುಕೊಂಡು ರಾಷ್ಟ್ರದ ಉದ್ದಗಲಕ್ಕೂ ಆ ರಾಜ್ಯಗಳಿಗೆ ಇದನ್ನು ತಿಳಿಸಿ ಈವೊಂದು ತಿದ್ದುಪಡಿಯನ್ನು ಮಾಡಬೇಕೆಂದು ಕೇಳಿರತಕ್ಕ ಹಿನ್ನೆಲೆಯಲ್ಲಿ ಆ ಸರ್ವೋಚ್ಚ ನ್ಯಾಯಾಲಯ ತೀರ್ಪಿಗೆ ಅನುಗುಣವಾಗಿ ಇನ್ನುಮುಂದಕ್ಕೆ ಸಿವಿಲ್ ಜಡ್ಜ್ಸ್ ಕೋರ್ಟುಗಳು 'ಸಿವಿಲ್ ಜಡ್ಜ್ ಸೀನಿಯರ್' ಎಂದು ಆಗುತ್ತದೆ. ಮುನಿಸಿಪಲ್ ಅಂಡ್ ಮ್ಯಾಜಿಸ್ಟ್ರೇಟ್ ಕೋರ್ಟ್‌ಗಳು 'ಸಿವಿಲ್ ಜಡ್ಜ್ - ಜೂನಿಯರ್' ಎಂದು ಹೇಳುತ್ತಾ ಇರತಕ್ಕಂಥ ನಾಮಾಂಕಿತದಿಂದ ಇನ್ನು ಮುಂದೆ ಮಾಡಬೇಕು ಎಂದು ಹೇಳುತ್ತಾ ಇರತಕ್ಕಂಥಾದ್ದಕ್ಕೆ ಇದು ಒಂದು ಚಿಕ್ಕದಾಗಿರತಕ್ಕಂಥ ತಿದ್ದುಪಡಿ. ಇದಕ್ಕೆ ಸದನ ತನ್ನ ಮಂಜೂರಾತಿಯನ್ನು ಕೊಡಬೇಕೆಂದು ಕೇಳುತ್ತಿದ್ದೇನೆ. ಇದು ಬಹಶಃ ಚರ್ಚೆಗೆ ಅವಕಾಶ ಇಲ್ಲದೇ ಇರತಕ್ಕಂಥ ಒಂದು ತಿದ್ದುಪಡಿ.

ಶ್ರೀ ವೈ. ರಾಮಕೃಷ್ಣ (ಆನೇಕಲ್) : ಈಗ 93 ಎಂದು ತಾವು ಹೇಳಿದಿರಿ. ನಾಲ್ಕು ವರ್ಷಗಳ ಕಾಲ ಏಕೆ ತಡವಾಯಿತು? ಎರಡನೇಯದಾಗಿ, ಇದನ್ನು ಎಲ್ಲಾ ರಾಜ್ಯಗಳಲ್ಲೂ ಪರಿಪಾಲನೆ ಮಾಡಿದ್ದಾರೆಯೆ? ಮೂರನೇಯದು, ಲಾ ಕಮಿಷನ್